**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 13**

**ಸಿಡಬ್ಲ್ಯೂ ನಂಃ 20**

**ಸಾಕ್ಷಿಯನ್ನು ದಿನಾಂಕಃ 28-08-2025**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರಾಜಪ್ಪ |
| ತಂದೆಯ ಹೆಸರು | ಃ | ಲಕ್ಷ್ಮಣ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

1 ನೇ ಆರೋಪಿ ಗೊತ್ತು. 2016 ರಲ್ಲಿ ನಾನು ತಳುವಗೇರಾ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದೆ. ಮೃತ ಮಂಜುಳಾಳ ಪರಿಚಯವಿತ್ತು. 2015-16 ರಲ್ಲಿ 1 ನೇ ಆರೋಪಿ ಪಂಚಾಯತಿಗೆ ಅರ್ಜಿ ಕೊಟ್ಟ ವಿಚಾರ ಹಾಗೂ ನಾನು ಅದನ್ನು ಶಿಫಾರಸ್ಸು ಮಾಡಿದ ಬಗ್ಗೆ ಗೊತ್ತಿಲ್ಲ. ಮಂಜುಳಾ ಹೇಗೆ ತೀರಿಕೊಂಡಳು ಮತ್ತು ಆರೋಪಿಗಳ ವಿರುದ್ಧ ಏಕೆ ಕೇಸು ಮಾಡಲಾಗಿದೆ ಎಂದು ಗೊತ್ತಿಲ್ಲ. ಮಂಜುಳಾ ಮತ್ತು 1 ನೇ ಆರೋಪಿಯ ಮಧ್ಯ ಸಂಬಂಧ ಯಾವ ರೀತಿ ಇತ್ತು ಎಂದು ಗೊತ್ತಿಲ್ಲ. ಅವರ ಮಧ್ಯ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಮೇಲೆ ನಂತರ ಏನು ಆರೋಪ ಬಂತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

2). 2015 ರಲ್ಲಿ 1 ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗಾಗಿ ಕೊಟ್ಟ ಅರ್ಜಿಯನ್ನು ಪಂಚಾಯತಿಯಲ್ಲಿ ನಾವು ಮನ್ನಿಸಿ ಶಿಫಾರಸ್ಸು ಮಾಡಿದ್ದೆವು ಎಂದರೆ ಸರಿಯಲ್ಲ. ಮೃತ ಮಂಜುಳಾ ಆ ಸಮಯ ಅಲ್ಲಿ ಹಾಜರಿದ್ದಳು ಎಂದರೆ ಗೊತ್ತಿಲ್ಲ. ನಾವು ಶಿಫಾರಸ್ಸು ಮಾಡಿದ ಅರ್ಜಿಯನ್ನು 1 ನೇ ಆರೋಪಿ ಮಂಜುಳಾಳ ಕೈಗೆ ಕೊಟ್ಟು ತಳುವಗೇರಾ ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ತಲುಪಿಸುವಂತೆ ಹೇಳಿದ್ದಳು ಎಂದರೆ ಗೊತ್ತಿಲ್ಲ. ಆ ಅರ್ಜಿಯನ್ನು ಗ್ರಾಮ ಪಂಚಾಯತಿ

ಕಾರ್ಯಾಲಯಕ್ಕೆ ತಲುಪಿಸದೇ ಆಕೆಯ ಬಳಿ ಇಟ್ಟುಕೊಂಡಿದ್ದಳು ಎಂದರೆ ಗೊತ್ತಿಲ್ಲ. ಈ ವಿಚಾರದಲ್ಲಿ ಅವರಿಬ್ಬರ ಮಧ್ಯ ವೈಮನಸ್ಸು ಇತ್ತು ಹಾಗೂ ಅವರಿಬ್ಬರೂ ಜಗಳ ಮಾಡಿಕೊಂಡಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಇದೇ ವಿಚಾರದಿಂದ ದಿಃ **16-3-2016** ರಂದು ಸಂಜೆ **7** ಗಂಟೆ ಸುಮಾರಿಗೆ ಕುಷ್ಟಗಿ ಯಲ್ಲಿರುವ ತನ್ನ ರೂಮಿಗೆ ಮಂಜುಳಾಳನ್ನು **1** ನೇ ಆರೋಪಿ ಕರೆಸಿಕೊಂಡು ಸ್ಪ್ರೈಟ್ ಗೆ ನಿದ್ದೆ ಗುಳಿಗೆ ಹಾಕಿ ಆಕೆ ಮಲಗಿದ್ದಾಗ ಟಾವೆಲ್ಲನಿಂದ ಕುತ್ತಿಗೆಗೆ ಬಿಗಿದುಕೊಲೆ ಮಾಡಿ **2** ನೇ ಆರೋಪಿಯನ್ನು ಕರೆಸಿಕೊಂಡು ಆತನ ಬೈಕ ಮೇಲೆ ಕುರುಬನಾಳ ಸೀಮಾ ಬಳಿ ಕೊಂಡು ಹೋಗಿ ಸುಟ್ಟು ಹಾಕಿದ ವಿಚಾರ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಇದೇ ರೀತಿ "ನಾನು ಈ ಮೇಲೆ ಕಾಣಿಸಿದ . . . . ಸುಟ್ಟಿದ್ದು ಇರುತ್ತದೆ'' ಎಂದು ನಿಪಿ **8** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : **1** ನೇ ಆರೋಪಿಯ ಪರ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 12**

**ಸಿಡಬ್ಲ್ಯೂ ನಂಃ 19**

**ಸಾಕ್ಷಿಯನ್ನು ದಿನಾಂಕಃ 28-08-2025**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

ಸಾಕ್ಷಿದಾರನ ಹೆಸರು : ಶರಣಪ್ಪ
ತಂದೆಯ ಹೆಸರು : ಪರಸಪ್ಪ
ವಯಸ್ಸು : 46 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ವಣಗೇರಿ

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಾ.

1 ನೇ ಆರೋಪಿ ಗೊತ್ತು. 2016 ರಲ್ಲಿ ನಾನು ತಳುವಗೇರಾ ಗ್ರಾಮ ಪಂಚಾಯತಿಯ ಉಪಾಧ್ಯಕ್ಷನಾಗಿದ್ದೆ. ಮೃತ ಮಂಜುಳಾಳ ಪರಿಚಯವಿತ್ತು. ಆಕೆ ಆಶಾಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಳು. 2015-16 ರಲ್ಲಿ 1 ನೇ ಆರೋಪಿ ಪಂಚಾಯತಿಗೆ ಅರ್ಜಿ ಕೊಟ್ಟ ವಿಚಾರ ಹಾಗೂ ನಾನು ಅದನ್ನು ಶಿಫಾರಸ್ಸು ಮಾಡಿದ ಬಗ್ಗೆ ಗೊತ್ತಿಲ್ಲ. ಮಂಜುಳಾ ಹೇಗೆ ತೀರಿಕೊಂಡಳು ಮತ್ತು ಆರೋಪಿಗಳ ವಿರುದ್ಧ ಏಕೆ ಕೇಸು ಮಾಡಲಾಗಿದೆ ಎಂದು ಗೊತ್ತಿಲ್ಲ. ಮಂಜುಳಾ ಮತ್ತು 1 ನೇ ಆರೋಪಿಯ ಮಧ್ಯ ಸಂಬಂಧ ಯಾವ ರೀತಿ ಇತ್ತು ಎಂದು ಗೊತ್ತಿಲ್ಲ. ಅವರ ಮಧ್ಯ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಮೇಲೆ ನಂತರ ಏನು ಆರೋಪ ಬಂತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

2). 2015 ರಲ್ಲಿ 1 ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗಾಗಿ ಕೊಟ್ಟ ಅರ್ಜಿಯನ್ನು ಪಂಚಾಯತಿಯಲ್ಲಿ ನಾವು ಮನ್ನಿಸಿ ಶಿಫಾರಸ್ಸು ಮಾಡಿದ್ದೆವು ಎಂದರೆ ಗೊತ್ತಿಲ್ಲ. ಮೃತ ಮಂಜುಳಾ ಆ ಸಮಯ ಅಲ್ಲಿ ಹಾಜರಿದ್ದಳು ಎಂದರೆ ನೆನಪಿಲ್ಲ. ನಾವು ಶಿಫಾರಸ್ಸು ಮಾಡಿದ ಅರ್ಜಿಯನ್ನು 1 ನೇ ಆರೋಪಿ ಮಂಜುಳಾಳ ಕೈಗೆ ಕೊಟ್ಟು ತಳುವಗೇರಾ ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ತಲುಪಿಸುವಂತೆ

ಹೇಳಿದ್ದಳು ಎಂದರೆ ಗೊತ್ತಿಲ್ಲ. ಆ ಅರ್ಜಿಯನ್ನು ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ತಲುಪಿಸದೇ ಆಕೆಯ ಬಳಿ ಇಟ್ಟುಕೊಂಡಿದ್ದಳು ಎಂದರೆ ಗೊತ್ತಿಲ್ಲ. ಈ ವಿಚಾರದಲ್ಲಿ ಅವರಿಬ್ಬರ ಮಧ್ಯ ವೈಮನಸ್ಸು ಇತ್ತು ಹಾಗೂ ಅವರಿಬ್ಬರೂ ಜಗಳ ಮಾಡಿಕೊಂಡಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಇದೇ ವಿಚಾರದಿಂದ ದಿಃ **16-3-2016** ರಂದು ಸಂಜೆ **7** ಗಂಟೆ ಸುಮಾರಿಗೆ ಕುಷ್ಟಗಿ ಯಲ್ಲಿರುವ ತನ್ನ ರೂಮಿಗೆ ಮಂಜುಳಾಳನ್ನು **1** ನೇ ಆರೋಪಿ ಕರೆಸಿಕೊಂಡು ಸ್ಪ್ರೈಟ್ ಗೆ ನಿದ್ದೆ ಗುಳಿಗೆ ಹಾಕಿ ಆಕೆ ಮಲಗಿದ್ದಾಗ ಟಾವೆಲ್ಲನಿಂದ ಕುತ್ತಿಗೆಗೆ ಬಿಗಿದುಕೊಲೆ ಮಾಡಿ **2** ನೇ ಆರೋಪಿಯನ್ನು ಕರೆಸಿಕೊಂಡು ಆತನ ಬೈಕ ಮೇಲೆ ಕುರುಬನಾಳ ಸೀಮಾ ಬಳಿ ಕೊಂಡು ಹೋಗಿ ಸುಟ್ಟು ಹಾಕಿದ ವಿಚಾರ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಇದೇ ರೀತಿ "ನಾನು ಈ ಮೇಲೆ ಕಾಣಿಸಿದ . . . . ಸುಟ್ಟಿದ್ದು ಇರುತ್ತದೆ'' ಎಂದು <u>ನಿಪಿ 7 ರೀತ್ಯ ಹೇಳಿಕೆ</u> ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : **1** ನೇ ಆರೋಪಿಯ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 11**

**ಸಿಡಬ್ಲ್ಯೂ ನಂಃ 18**

**ಸಾಕ್ಷಿಯನ್ನು ದಿನಾಂಕಃ 28-08-2025**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಚಂದ್ರಶೇಖರ |
| ತಂದೆಯ ಹೆಸರು | ಃ | ಪರಮೇಶಪ್ಪ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಅಕ್ಕಸಾಲಿಗ |
| ವಾಸಸ್ಥಳ | ಃ | ಕುಷ್ಟಗಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

ಕುಷ್ಟಗಿಯ ಕನಕರಾಜ ಸರ್ಕಲ್, ಗಜೇಂದ್ರಗಡ ರಸ್ತೆಯಲ್ಲಿ ನಮ್ಮ ಜ್ಯುವೆಲರಿ ಅಂಗಡಿ ಇದೆ. 2ನೇ ಆರೋಪಿ ಪರಸಪ್ಪನ ಪರಿಚಯವಿದೆ. ಆತ ಪುರಸಭೆಯಲ್ಲಿ ಕೆಲಸ ಮಾಡುತ್ತಾನೆ. ಸುಮಾರು 2016-17ನೇ ಸಾಲಿನಲ್ಲಿ ಬಂಗಾರದ ಡ್ರಾಪ್ಸ ಗುಂಡು, 2 ತಾಳಿ ಕೊಟ್ಟು ಸುತ್ತುಂಗರ ಮಾಡಿಕೊಡುವಂತೆ 2ನೇ ಆರೋಪಿ ಹೇಳಿದ್ದ. ಸದರಿ ಬಂಗಾರ 5 ಗ್ರಾಂ ಇದ್ದು, ವೆಸ್ಟೇಜ್ ತೆಗೆದು 3 ಗ್ರಾಂ ಆಗುತ್ತದೆ ಎಂದು ಹೇಳಿದೆ. ಅದಕ್ಕೆ ಇನ್ನೂ 2 ಗ್ರಾಂ ಸೇರಿಸಿ 5 ಗ್ರಾಂ ಸುತ್ತುಂಗುರ ಮಾಡಿಕೊಡು ಹೆಚ್ಚಿನ ಹಣ ಕೊಡುತ್ತೇನೆ ಎಂದು ತಿಳಿಸಿದ್ದ. ನಾನು ಚೀಟಿ/ ರಸೀದಿ ಹಚ್ಚಿ ಕೊಟ್ಟೆ. ಆ ಒಡವೆಗಳನ್ನು ನಾನು ಕರಿಗಿಸಿ ಇಟ್ಟಿದ್ದೆ. ನಂತರ ಪೊಲೀಸರು ಬಂದು ಈ ರೀತಿ ಕೇಸ ಆಗಿದೆ ಬಂಗಾರ ಕೊಡಬೇಕು ಎಂದಾಗ ನಾನು ಆ 3 ಗ್ರಾಂ ಬಂಗಾರವನ್ನು ನಾನು ಪೊಲೀಸರಿಗೆ ಕೊಟ್ಟೆ. ಆ ಬಂಗಾರವನ್ನು ನೋಡಿದರೆ ಗುರುತಿಸಬಲ್ಲೆ. ಸ್ವತ್ತು ಪಟ್ಟಿ ನಂಬರಃ 29/2016 ರಲ್ಲಿರುವ 3 ಗ್ರಾಂ ಬಂಗಾರದ ಗಟ್ಟಿ, ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು-7 ಎಂದು ಗುರುತಿಸಲಾಯಿತು. ಸದರಿ ಆರೋಪಿ ಪರಸಪ್ಪ ಈಗ ನ್ಯಾಯಾಲಯದಲ್ಲಿದ್ದಾನೆ.

ಪಾಟೀ ಸವಾಲು : 2ನೇ ಆರೋಪಿಯ ಪರ ವಕೀಲರಿಂದ

2). 2 ನೇ ಆರೋಪಿ ನಮ್ಮ ಅಂಗಡಿಗೆ ಬಂದ ದಿನಾಂಕ ಗೊತ್ತಿಲ್ಲ. ನನ್ನ ಅಂಗಡಿ ನೋಂದಣಿಯಾಗಿದೆ ಎಂದರೆ ಸರಿ. ನಮ್ಮ ಅಂಗಡಿಗೆ ಸಿಸಿ ಟಿ ವಿ ಕ್ಯಾಮರಾಗಳನ್ನು ಅಳವಡಿಸಿರುವುದಿಲ್ಲ. 2 ನೇ ಆರೋಪಿ ನಮ್ಮ ಅಂಗಡಿಗೆ ಬಂದಾಗ ಬೇರೆ ಸಾರ್ವಜನಿಕರು ಇರಲಿಲ್ಲ. ಒಂದು ಕಿವಿಗೆ ಹಾಕುವ ಗುಂಡು ಮತ್ತು ಡ್ರಾಪ್ಸ ಮಾತ್ರ ನನಗೆ ಆತ ಕೊಟ್ಟಿದ್ದ. ಅವುಗಳನ್ನು ಪ್ರತ್ಯೇಕವಾಗಿ ನಾನು ತೂಕ ಮಾಡಿರಲಿಲ್ಲ ಆದರೆ ಒಟ್ಟಾಗಿ ತೂಕ ಮಾಡಿದಾಗ 5 ಗ್ರಾಂ ಇತ್ತು. ಠಾಣೆಯಲ್ಲಿ ವಿಚಾರಿಸಿದಾಗ 5 ಗ್ರಾಂ ತೂಕ ಇದ್ದ ವಿಚಾರವನ್ನು ನಾನು ಪೊಲೀಸರಿಗೆ ಹೇಳಿದ್ದೆ. ಬೇರೆ ಗುಂಡು ಮತ್ತು ಡ್ರಾಪ್ಸ ಕರಗಿಸಿದಾಗ ಮುದ್ದೆಮಾಲು -7 ರ ಆಕಾರದಲ್ಲೇ ಇರುತ್ತದೆ ಆದರೆ ಕ್ವಾಲಿಟಿ ಬೇರೆಯಾಗಬಹುದು. ಮುದ್ದೆಮಾಲು-7, 2 ನೇ ಆರೋಪಿ ತಂದುಕೊಟ್ಟ ಆಭರಣಗಳ ಗಟ್ಟಿಯಾಗಿರುತ್ತದೆ ಎಂದು ಹೇಗೆ ಹೇಳುತ್ತೀರಿ ಎಂಬ ಪ್ರಶ್ನೆಗೆ ಆತ ತಂದು ಕೊಟ್ಟಿದ್ದನ್ನೆ ನಾನು ಕರಗಿಸಿ ಇಟ್ಟಿದ್ದೆ ಎಂದು ಸಾಕ್ಷಿದಾರರು ನುಡಿದಿರುತ್ತಾರೆ.

3). ಠಾಣೆಗೆ ಬಂದಾಗ ನಾನು ಪೊಲೀಸರಿಗೆ ರಸೀದಿ ಕೊಟ್ಟಿದ್ದೆ. 2 ನೇ ಆರೋಪಿ ನಮ್ಮ ಅಂಗಡಿಗೆ ಬಂದು ಯಾವುದೇ ಆಭರಣಗಳನ್ನು ಕೊಟ್ಟಿರಲಿಲ್ಲ ಹಾಗೂ ನಾನು ಅದನ್ನು ಕರಗಿಸಿ ಇಟ್ಟು ಪೊಲೀಸರಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ